ಇ) ಆದ್ಯತೆ, ಅಗತ್ಯತೆ, ಅನುದಾನ ಲಭ್ಯತೆ ಇವುಗಳಿಗನುಗುಣವಾಗಿ ಹಂತಹಂತವಾಗಿ ಕಛೇರಿ ಕಟ್ಟಡಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೆ, ತಿಂಗಳಿಗೆ ಲಕ್ಷಾಂತರ ರೂಪಾಯಿಗಳ ಹಣವನ್ನು ಬಾಡಿಗೆ ರೂಪದಲ್ಲಿ ಸರ್ಕಾರೀ ಕಛೇರಿಗಳು ನಡೆಯುತಕ್ಕ ಕಟ್ಟಡಗಳಿಗೆ ಬೇರೆಯವರಿಗೆ ಕೊಡಲಾಗುತ್ತಿದೆ. ಇದಕ್ಕೆ ಬದಲಾಗಿ ನಮ್ಮ ಸರ್ಕಾರೀ ಕಛೇರಿಗಳಿಗೋಸ್ಕರ ಸರ್ಕಾರವೇ ಸ್ವಂತ ಕಟ್ಟಡಗಳನ್ನ ಕಟ್ಟಿಸಿಕೊಂಡರೆ ಖಾಸಗಿ ಯವರಿಗೆ ಲಕ್ಷಾಂತರ ರೂಪಾಯಿಗಳು ಬಾಡಿಗೆ ಕೊಡುವುದನ್ನು ಸರ್ಕಾರವೇ ಉಳಿಸಿಕೊಳ್ಳಬಹುದಲ್ಲವೆ ? ಈ ರೀತಿ ಏತಕ್ಕೆ ಮಾಡಬಾರದು?

ಶ್ರೀ ಹೆಚ್. ಡಿ ದೇವೇಗೌಡ.—ನಾವು ಸರ್ಕಾರೀ ಕಛೇರಿಗಳನ್ನು ನಡೆಸಲು ಖಾಸಗೀ ಕಟ್ಟಡಗಳಿಗೆ ೭,೮೫,೭೮೯ ರೂಪಾಯಿಗಳನ್ನು ಬಾಡಿಗೆಗೋಸ್ಕರ ಕೊಡುತ್ತಿದ್ದೇವೆ. ಆದರೆ ನಮ್ಮ ಕಛೇರಿಗಳಿಗೆ ಬೇಕಾದ ಎಲ್ಲಾ ಕಟ್ಟಡಗಳನ್ನೂ ನಾವೇ ಸ್ವಂತವಾಗಿ ಕಟ್ಟಿಸಿಕೊಳ್ಳಬೇಕಾದರೆ ಬಹಳಷ್ಟು ಹಣವನ್ನು ಒಮ್ಮೆಲೇ ಖರ್ಚು ಮಾಡಬೇಕಾಗುತ್ತದೆ. ಇದು ಸಧ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲದ ಮಾತು ಎಂಬುದು ಮಾನ್ಯ ಸದಸ್ಯರಿಗೂ ಕೂಡ ಗೊತ್ತಿದೆ. ಸಧ್ಯಕ್ಕೆ ಈ ವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಹೋಗುತ್ತಾ ನಮ್ಮ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಅಗತ್ಯತೆಯನ್ನು ನೋಡಿಕೊಂಡು ಹಂತಹಂತವಾಗಿ ಸರ್ಕಾರ ಸ್ವಂತ ಕಟ್ಟಡಗಳನ್ನು ನಿರ್ಮಿಸಿಕೊಳ್ಳಲು ವ್ಯವಸ್ಥೆ ಮಾಡಿಕೊಳ್ಳುತ್ತೇವೆಂದು ಮಾತ್ರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಅಧ್ಯಕ್ಷರು.—ಅಲ್ಪಾವಕಾಲಾವಧಿ ಪ್ರಶ್ನೆ ನಂ. ೧ (೨).

ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ಪುನರ್ ನೇಮಕಗೊಂಡ ಮಾಜಿ ಸೈನಿಕರ ಬಗ್ಗೆ

೨. ಶ್ರೀ ಜಿ.ವಿ. ಮಂಟೂರ್.—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ಪುನರ್ ನೇಮಕಗೊಂಡ ಮಾಜಿ ಸೈನಿಕರಿಗೆ ಸರ್ಕಾರಿ ವಸತಿ ಗೃಹಗಳನ್ನು ಶೇಕಡಾವಾರು ಎಷ್ಟನ್ನು ಕಾಯ್ದಿರಿಸಲಾಗಿದೆ ?

ಆ) ಈ ಹಿಂದೆ ಇಂಥ ಮಾಜಿ ಸೈನಿಕರಿಗಾಗಿ ಕಾಯ್ದಿರಿಸುವ ಪದ್ಧತಿ ಇದ್ದಲ್ಲಿ ಅದನ್ನು ತೆಗೆದು ಹಾಕಲು ಕಾರಣವೇನು ?

ಇ) ಸದರಿ ಪದ್ಧತಿಯನ್ನು ಕೂಡಲೇ ಜಾರಿಗೊಳಿಸಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು).—

ಅ) ಸರ್ಕಾರಿ ಸೇವೆಯಲ್ಲಿರುವ ಮಾಜಿ ಸೈನಿಕರಿಗಾಗಿ ರಾಜಾಜಿನಗರ ಮತ್ತು ಹೊಂಬೇಗೌಡ ನಗರ ಬಡಾವಣೆಯಲ್ಲಿರುವ ವಸತಿ ಗೃಹಗಳಲ್ಲಿ ಶೇಕಡ ೯ರಷ್ಟು ಕಾಯ್ದಿರಿಸಲಾಗಿದೆ :

ಆ) ಈ ಪದ್ಧತಿಯನ್ನು ತೆಗೆದು ಹಾಕಿಲ್ಲ, ಇನ್ನೂ ಜಾರಿಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಎ ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಮತ್ತು ಇದರ ಜೊತೆಗೆ ೧೩ನೇ ತಾರೀಖಿನ ೧೧ನೇ ಪಟ್ಟಿಯನ್ನೂ ಕೂಡ ಸಭೆಯ ಮುಂದೆ ಮಂಡಿಸಬಯಸುತ್ತೇನೆ.

ಅಧ್ಯಕ್ಷರು.—ಪಟ್ಟಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.